project. May I know whether all these factors were not examined before the Government of India took the decision long back to start the steel plant at Vijayanagar ?

SRI AZEEZ SAIT.—There are reports. All factors have been examined. I don't say 'no' to it. I would request him not to make this a political issue. Mysore and the entire State is as such interested as the hon. Member to have the steel plant at Hospet. I had a meeting with the Union Steel Minister recently and the Chief Minister also had a meeting with him recently. Something will come out of fit.

ಶ್ರೀ ಕೆ. ರಾಮಭಟ್.—ಸ್ವಾಮಿ ಅಲ್ಲಿಗೆ ೧೯೭೧ ರಲ್ಲಿ ಅಡಿಗಲ್ಲು ಹಾಕಿದ್ದಾರೆಂದು ಹೇಳಿದಿರಿ, ಅಲ್ಲಿಂದ ಇಲ್ಲಿಯ ತನಕ ಯಾವುದೇ ತರಹದ ಪ್ರಗತಿಯಾಗದೇ ಇರುವುದಕ್ಕೆ ಕಾರಣವೇನೆಂಬುದನ್ನು ತಿಳಿಸುತ್ತೀರಾ ಸ್ವಾಮಿ ?

ಶ್ರೀ ಅಜೀಜ್ ಸೇಟ್.—ಅಡಿಗಲ್ಲು ಹಾಕಿರುವುದು ೧೯೭೧ರಲ್ಲಿ, ಈಗ ೧೯೭೯ ಅಂದರೆ it is hardly 8 years. According to my experience there are instances where the foundation stone was laid 20 years ago and yet the project has not materialised.

Residential Houses owned by Mysore City Corporation

713 SRI H. GANGADHARAN (Krishnaraja).—Will the Minister for Municipal Administration be pleased to state :—

(a) how many residential Houses are owned by Mysore City Corporation ;

(b) whether they are leased out to Municipal Employees only, if not on what basis they are leased to others,

(c) whether it is a fact that some occupants of Harijan community are forced to vacate while others are not asked to vacate the houses ?

SRI H. C. SRIKANTAIAH (Minister for Municipal Administration).—

(a) 96 houses.

(b) 76 houses have been rented out. 20 houses have been rented to officials of Railway and Education Department.

(c) No.

ಶ್ರೀ ಎಚ್. ಗಂಗಾಧರನ್.—ಸ್ವಾಮಿ, ಮುನಿಸಿಪಾಲಿಟಿಯಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದು ಕಾರಣಾಂತರಗಳಿಂದ ಬಿಟ್ಟು ಬೇರೆ ಉದ್ದಿಮೆಯಲ್ಲಿ ಅವಲಂಬಿತರಾಗಿರುವ ಒಬ್ಬ ಹರಿಜನ ಕೆಲಸಗಾರರನ್ನು ಮನೆ ಖಾಲಿ ಮಾಡುವಂತೆ ಪುರಸಭೆಯವರು ಒತ್ತಾಯ ಮಾಡುತ್ತಿದ್ದು ಸರಿಯೇ ಸ್ವಾಮಿ ?

†ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾಡಿರಬಹುದು.

ಶ್ರೀ ಎಚ್. ಗಂಗಾಧರನ್.—ಅವನು ಬಹಳ ವರ್ಷಗಳಿಂದ ಅದೇ ಮನೆಯನ್ನು ಅವಲಂಬನೆ ಮಾಡಿಕೊಂಡು ಬಂದಿರುವುದರಿಂದ ಬೇರೆ ಮನೆ ಸಿಗುವವರೆಗೂ ಅವಕಾಶ ಮಾಡಿಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅವರೂ ಹರಿಜನರಾಗಿದ್ದರೂ ಸಹ ಕೆಲಸ ಬಿಟ್ಟು ಬೇರೆ ಕಡೆಗೆ ಹೋಗಿರುವುದರಿಂದ, ಇನ್ನು ಸಾಕಷ್ಟು ಹರಿಜನರು ಮನೆಗಳು ಇಲ್ಲದೇ ಇರುವುದರಿಂದ ಅವರಿಗೆ ಆ ಮನೆಯನ್ನು ಕೊಡಿಸಿ ಕೊಡಬೇಕಾಗುತ್ತದೆ. ಆದುದರಿಂದ ಅವರು ಆ ಮನೆಯನ್ನು ಖಾಲಿ ಮಾಡಲೇಬೇಕಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಅವರು ಬಹಳ ವರ್ಷಗಳಿಂದ ಪುರಸಭೆಯಲ್ಲಿ ಬಹಳ ಗೌರವವಾಗಿ ಕೆಲಸ ಮಾಡಿಕೊಂಡು ಬಂದಿದ್ದಾನೆ, ಯಾವುದೋ ಕಾರಣದಿಂದ ಕೆಲಸ ಬಿಟ್ಟಿರುತ್ತಾನೆ, ಇಲ್ಲ ರಿಟೈರ್ ಆಗುವ ಸಂದರ್ಭ ಇದ್ದುದರಿಂದಲೋ ಏನೋ ಬಿಟ್ಟಿದ್ದಾನೆ, ಅವನಿಗೆ ಈಗ ರೆಂಟ್ ಕಂಟ್ರೋಲ್‌ನಲ್ಲಿ ಮನೆ ಸಿಗುವುದು ಕಷ್ಟವಿದೆ, ಇಲ್ಲ ಬೇರೆ ಕಡೆ ಮನೆ ಸಿಗುವುದು ಕಷ್ಟವಿರುವುದರಿಂದ, ಅವನಿಗೆ ಬೇರೆ ಮನೆ ಸಿಗುವವರೆಗಾದರೂ ಅಲ್ಲಿ ಇರಲು ವ್ಯವಸ್ಥೆ ಮಾಡಿಕೊಡುತ್ತೀರಾ ಸ್ವಾಮಿ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಶ್ರೀ ಗಂಗಾಧರನ್‌ರವರು ಹರಿಜನರ ಬಗ್ಗೆ ಇಷ್ಟೊಂದು ಕಳಕಳಿ ವ್ಯಕ್ತಪಡಿಸುತ್ತಿರುವುದರಿಂದ ಅವರು ಬೇರೆ ಮನೆ ಸಿಗುವವರೆಗೂ ಅವರಿಗೆ ಇರುವುದಕ್ಕೆ ಅವಕಾಶ ಮಾಡಿಕೊಡಬಹುದು.

ಶ್ರೀ ಟಿ. ಬಿ. ಜಯಚಂದ್ರ.—ಈಗ ತಾವು ಹೇಳಿದ ಸ್ಕೀಮುಗಳು ಎಷ್ಟು ದಿವಸಗಳಲ್ಲಿ ಫಲಕಾರಿಯಾಗುತ್ತವೆ, ಯಾವಾಗ ಕೊಡಿಸುವಂಥ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ವಿಳಂಬ ಇಲ್ಲದೆ ಅದನ್ನು ಮಾಡುವ ಪ್ರಯತ್ನ ಮಾಡುತ್ತೇನೆ.

Starting a Steel plant at Mangalore

425 SRI S. M. SHEERNALY CHANDRASEKHAR (Hosanagar).—Will the Minister for Industries and Commerce be pleased to state :—

(a) whether Government have come to know that the Government of India propose to start a steel plant at Mangalore ;

(b) if so, whether it is in addition to the one proposed steel plant to be put up at Hospet ;

(c) whether Government is aware of any reasons why the Hospet steel plant is not progressing well ;

(d) whether they are aware of any proposal before the Government of India to drop it;

(e) if not when it is expected to be completed ?

SRI AZEEZ SAIT (Minister for Industries and Commerce).—

(a) Yes.

(b) Can be presumed to be in addition to Hospet.

(c) No.

(d) No.